ಕರ್ನಾಟಕ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ,
ಆಯುಕ್ತರ ಕಛೇರಿ, ರೊದ್ದ ರಸ್ತೆ, ಧಾರವಾಡ-580 008
ದೂರವಾಣಿ: 0836-2217066 ಫ್ಯಾಕ್ಸ್: 0836-2217067 ಈಮೇಲ್: cpidharwad@gmail.com
*******************************************************************************

ಸಂಖ್ಯೆ:ಸಿ1(ಸಿ3)/ಸಿಆ/ಬೆರಳಚ್ಚುಗಾರರ ಬಡ್ತಿ/37/2014-15 ದಿನಾಂಕ: 27-12-2016

## ಅಧಿಸೂಚನೆ

ವಿಷಯ: ಬೆರಳಚ್ಚುಗಾರರ ಹುದ್ದೆಯಿಂದ ಶೀಘ್ರಲಿಪಿಗಾರರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡುವ ಕುರಿತು.

ಉಲ್ಲೇಖ:
1. ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್:22:ಎಸ್‌ಬಿಸಿ:79 ದಿನಾಂಕ: 30-8-1979
2. ಸರ್ಕಾರಿ ಆದೇಶ ಸಂಖ್ಯೆ ಇಡಿ:250:ಡಿಪಿಐ:2006 ದಿನಾಂಕ: 22-02-2008
3. ಸರ್ಕಾರಿ ಸುತ್ತೋಲೆ ಸಂಖ್ಯೆ ಇಡಿ:464:ಡಿಪಿಐ:2008 ದಿನಾಂಕ: 06-01-2009
4. ಈ ಕಛೇರಿ ಅಧಿಸೂಚನೆ ಸಂಖ್ಯೆ:ಸಿ3/ದ್ವಿ.ದ.ಸ & ಸಿ.ಸಿ.ಟಿ/ಜೇಪ/42/2015-16 ದಿ: 21-10-2016
5. ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿ ದಿನಾಂಕ: 22-12-2016.

**ಪ್ರಸ್ತಾವನೆ:**

ಈ ಕಛೇರಿ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಬೆರಳಚ್ಚುಗಾರರ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ-[4]ರ ಪ್ರಕಾರ ಪ್ರಕಟಿಸಲಾಗಿದೆ. ಶೀಘ್ರಲಿಪಿಗಾರರ ಖಾಲಿ ಹುದ್ದೆಗಳ ಲಭ್ಯತೆ ಆಧಾರದ ಮೇಲೆ ಮತ್ತು ಉಲ್ಲೇಖ-[1] ರ ಪ್ರಕಾರ ಮೀಸಲಾತಿ ಆಧರಿಸಿ ಬಡ್ತಿಗೆ ಅರ್ಹತೆ ಹೊಂದಿದ ಬೆರಳಚ್ಚುಗಾರರಿಗೆ ಉಲ್ಲೇಖ-[1], [2] ಹಾಗೂ [3] ರ ಆದೇಶಗಳನ್ವಯ ಶೀಘ್ರಲಿಪಿಗಾರರ ಹುದ್ದೆಗೆ ಬಡ್ತಿ ನೀಡುವ ಕುರಿತು ಪರಿಗಣಿಸಿ ಈ ಮೇಲ್ಕಂಡ ಉಲ್ಲೇಖ-[5] ರನ್ವಯ ಇಲಾಖಾ ಮುಂಬಡ್ತಿ ಸಭೆಯಲ್ಲಿ ಚರ್ಚಿಸಿ, ಸಭೆ ನಡವಳಿ ನಿರ್ಣಯದಂತೆ ಈ ಕೆಳಕಂಡಂತೆ ತೋರಿಸಿರುವ ಬೆರಳಚ್ಚುಗಾರರಿಗೆ ಶೀಘ್ರಲಿಪಿಗಾರರ ಹುದ್ದೆಯ ವೇತನ ಶ್ರೇಣಿ ರೂ. 14,550-26,700 ರಲ್ಲಿ ಸ್ಥಾನಪನ್ನ ಬಡ್ತಿ ನೀಡುವ ಕುರಿತು ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ:**

ಮೇಲ್ಕಂಡ ಉಲ್ಲೇಖಗಳನ್ವಯ ಜೇಷ್ಠತೆ/ಮೀಸಲಾತಿ ಆಧರಿಸಿ ಮತ್ತು ಇಲಾಖಾ ಮುಂಬಡ್ತಿ ಸಭೆಯಲ್ಲಿ ನಿರ್ಣಯಿಸಿದಂತೆ ಈ ಕೆಳಕಂಡಂತೆ ನಮೂದಿಸಿರುವ ಬೆರಳಚ್ಚುಗಾರರ ವೇತನ ಶ್ರೇಣಿ ರೂ.11,600-21,000 ರಿಂದ ಈ ಕೆಳಕಂಡ ಷರತ್ತುಗಳೊಂದಿಗೆ ಶೀಘ್ರಲಿಪಿಗಾರರ ಹುದ್ದೆಯ ವೇತನ ಶ್ರೇಣಿ ರೂ.14550-350-15600-400-17200-450-19000-500-21000-600-24600-700-26700 ರಲ್ಲಿ ಸ್ಥಾನಪನ್ನ ಬಡ್ತಿಯನ್ನು ಕೌನ್ಸಿಲಿಂಗ್ ಮೂಲಕ ನಡೆದ ಸ್ಥಳ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿ ಸ್ವತ: ಸ್ಥಳ ಆಯ್ಕೆ ಮಾಡಿಕೊಂಡ ಅವರ ಹೆಸರಿನ ಮುಂದೆ ಸೂಚಿಸಿದ ಕಛೇರಿಗೆ ಸ್ಥಳ ನಿಯುಕ್ತಿಗೊಳಿಸಿ ಸ್ಥಾನಪನ್ನ ಬಡ್ತಿ ನೀಡಿ ಆದೇಶಿಸಿದೆ.

| APPL.NO<br>SL.NO | NAME ,ADDRESS OF OFFICER | POSTED TO |
|---|---|---|
| 81<br>84 | ಪುಷ್ಪಾ ತೇಲಿ<br>ಸಹನಿರ್ದೇಶಕರ ಕಚೇರಿ, ಸಾ.ಶಿ. ಇಲಾಖೆ,<br>ಬೆಳಗಾವಿ (ಶ)<br>ಬೆಳಗಾಂವಿ<br>DESIG : ಬೆರಳಚ್ಚುಗಾರರು | 27/12/2016<br>ಉಪ ನಿರ್ದೇಶಕರ ಕಛೇರಿ, ಸಾ.ಶಿ ಇಲಾಖೆ,<br>ಬೆಳಗಾವಿ (ಶ)<br>ಬೆಳಗಾಂವಿ<br>DESIG : ಶೀಘ್ರಲಿಪಿಗಾರರು |
| 82<br>85 | ಕುಮಾರಿ ಸವಿತಾ ಟೇಟಂಬಿ<br>ಆಯುಕ್ತರ ಕಛೇರಿ ಸಾ. ಶಿ ಇಲಾಖೆ<br>ಧಾರವಾಡ (ಶ)<br>ಧಾರವಾಡ<br>DESIG : ಬೆರಳಚ್ಚುಗಾರರು | 27/12/2016<br>ಆಯುಕ್ತರ ಕಛೇರಿ ಸಾ. ಶಿ ಇಲಾಖೆ<br>ಧಾರವಾಡ (ಶ)<br>ಧಾರವಾಡ<br>DESIG : ಶೀಘ್ರಲಿಪಿಗಾರರು |

| APPL.NO SL.NO | NAME ,ADDRESS OF OFFICER | POSTED TO |
|---|---|---|
| 83<br>86 | ಶ್ರೀ ಜಿ ಸಿ ಬಿದರಿ<br>ಆಯುಕ್ತರ ಕಛೇರಿ ಸಾ. ಶಿ ಇಲಾಖೆ<br>ಧಾರವಾಡ (ಶ)<br>ಧಾರವಾಡ<br>DESIG : ಬೆರಳಚ್ಚುಗಾರರು | 27/12/2016<br>ಆಯುಕ್ತರ ಕಛೇರಿ ಸಾ. ಶಿ ಇಲಾಖೆ<br>ಧಾರವಾಡ (ಶ)<br>ಧಾರವಾಡ<br>DESIG : ಶೀಘ್ರಲಿಪಿಗಾರರು |
| 84<br>87 | ಕು:ಜ್ಯೋತಿ ಥಬಜ<br>ಸಹನಿರ್ದೇಶಕರ ಕಚೇರಿ, ಸಾ.ಶಿ. ಇಲಾಖೆ,<br>ಬೆಳಗಾವಿ (ಶ)<br>ಬೆಳಗಾಂವಿ<br>DESIG : ಬೆರಳಚ್ಚುಗಾರರು | 27/12/2016<br>ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಮಣ್ಣೂರ,<br>ಬೆಳಗಾವಿ (ಶ)<br>ಬೆಳಗಾಂವಿ<br>DESIG : ಶೀಘ್ರಲಿಪಿಗಾರರು |

ಷರತ್ತುಗಳು:

1. ಬಡ್ತಿ ಹೊಂದಿದ ಸಿಬ್ಬಂದಿಯವರನ್ನು ಒಂದು ವಾರದೊಳಗಾಗಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಸ್ಥಳದಿಂದ ಬಿಡುಗಡೆ/ಹಾಜರಪಡಿಸಿಕೊಳ್ಳುವುದನ್ನು ಪೂರ್ಣಗೊಳಿಸುವದು ಹಾಗೂ ಈ ಕಛೇರಿಗೆ ವರದಿಸುವದು.
2. ಬಡ್ತಿಗೆ ಅರ್ಹ ಸಿಬ್ಬಂದಿಯವರು ಕೌನ್ಸಿಲಿಂಗ್ ಮೂಲಕ ಸ್ಥಳ ಆಯ್ಕೆ ಮಾಡಿಕೊಂಡಿರುವ ಪ್ರಯುಕ್ತ ಯಾವುದೇ ವರ್ಗಾವಣೆ ಭತ್ಯೆ ಅಥವಾ ಸೇರುವಿಕೆಯ ಕಾಲಕ್ಕೆ ಅರ್ಹರಿರುವುದಿಲ್ಲ.
3. ಕೌನ್ಸಿಲಿಂಗ್ ಮೂಲಕ ಬಡ್ತಿ ಸ್ಥಳ ಆಯ್ಕೆ ಮಾಡಿಕೊಂಡಿರುವ ಪ್ರಯುಕ್ತ ಸ್ಥಳ ಮಾರ್ಪಾಡಿಸಲು ಅವಕಾಶವಿರುವುದಿಲ್ಲ ಹಾಗೂ ಬಡ್ತಿ ಮಾರ್ಪಾಡಿಗೆ ಯಾವುದೇ ರೀತಿಯ ಪ್ರತ್ಯಕ್ಷ ಹಾಗೂ ಪರೋಕ್ಷ ಪ್ರಭಾವ/ಒತ್ತಡ ತಂದಲ್ಲಿ ಬಡ್ತಿಯನ್ನು ರದ್ದುಪಡಿಸುವುದಲ್ಲದೇ ಸ್ಥಾನಪನ್ನ ಬಡ್ತಿ ಹೊಂದಲು ಇಚ್ಛೆ ಇರುವುದಿಲ್ಲವೆಂದು ಭಾವಿಸುವುದರ ಮೂಲಕ ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಾವಳಿಗಳು 1966 ರನ್ವಯ ಕ್ರಮ ಕೈಗೊಳ್ಳಲಾಗುವದು.
4. ನೌಕರರ ಬಿಡುಗಡೆ ಮತ್ತು ಕರ್ತವ್ಯಕ್ಕೆ ಹಾಜರಾದ ಬಗ್ಗೆ ತಪ್ಪದೇ ಈ ಕಛೇರಿಗೆ ವರದಿ ಸಲ್ಲಿಸುವುದು.

(ವೀರಣ್ಣ ಜಿ ತುರಮರಿ) 27/12
ಅಪರ ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ
ಧಾರವಾಡ

ಗೆ,

1. ಸಂಬಂಧಿಸಿದ ಸಿಬ್ಬಂದಿಯವರಿಗೆ.
2. ಸಂಬಂಧಿಸಿದ ಕಛೇರಿ ಮುಖ್ಯಸ್ಥರುಗಳಿಗೆ.
3. ವಿಭಾಗದ ಎಲ್ಲ ಉಪನಿರ್ದೇಶಕರು (ಆಡಳಿತ)/(ಅಭಿವೃದ್ಧಿ)

ಪ್ರತಿ ಮಾಹಿತಿಗಾಗಿ ಗೌರವಪೂರ್ವಕವಾಗಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕರ್ನಾಟಕ ಸರ್ಕಾರದ ಸಚಿವಾಲಯ ಬಹುಮಹಡಿ ಕಟ್ಟಡ ಬೆಂಗಳೂರು.
2. ಸಂಬಂಧಪಟ್ಟ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
3. ಸಂಬಂಧಪಟ್ಟ ತಾಲ್ಲೂಕು ಪಂಚಾಯತ ಕಾರ್ಯ ನಿರ್ವಾಹಕ ಅಧಿಕಾರಿಗಳು.
4. ಕಛೇರಿ ಪ್ರತಿ.